207

**II**

Total No. of Questions – 16
Total No. of Printed Pages – 4

Regd. No. | | | | | | | | | | |

## Part – II
## KANNADA, Paper – II
## (Second Language)

Time : 3 Hours] [Max. Marks : 100

I. (A) ಈ ಕೆಳಗಿನ ಪದ್ಯಗಳಲ್ಲಿ **ಒಂದರ** ಭಾವಾರ್ಥ ಬರೆಯಿರಿ. 1 × 5 = 5

ಎನಗೆ ವಿಭೀಷಣಂ ಹಿತಮನಾದರದಿಂದಮೆ ಪೇಳಿ ಕೇಳದಾ
ತನನವಿನೀತನೆಂ ಗಜರಿ ಗರ್ಜಿಸಿ ಬೈದನುಜಾತನುಂ ವಿನೀ
ತನನರಿಯಟ್ಟಿ ದುರ್ವ್ಯಸನಿಯೆಂ ಕಳಿದೆಂ ವ್ಯಸನಾಭಿಭೂತನಾ
ವನುಮನುರಾಗವೇಗದೆ ಹಿತಾಹಿತಚಿಂತೆಯನೇಕೆ ಮಾಡುವಂ.

**ಅಥವಾ**

ಹಂಚಿಕೊಂಡಿದ್ದಾರೆ ಅಪ್ಪ ಅಮ್ಮನನ್ನು
ಇಲ್ಲಿ ದೊಡ್ಡಮಗನ ತಾವಲ್ಲಿ ಮುದುಕಿ, ಸದ್ಯ ಕನ್ನಡ ದೇಶ
ಮಗ ಸೊಸೆ ಹೊರಗೆ ಹೋದಾಗಲಾದರೂ ನಾಲ್ಕು ಮಾತಾಡಿ
ತೀರಿಸಿಕೊಳ್ಳುತ್ತಾಳೆ ಬಾಯ ತುರಿಕೆ, ಪಾಪ ಮುದುಕ ದೂರದ
ಅಸ್ಸಾಮಿನಲ್ಲಿ, ಅಲ್ಲಿಯ ಮಾತು ಅವನಿಗೆ ಸಸೇಮಿರ ಬರದು.

(B) ಈ ಕೆಳಗಿನ ಇಬ್ಬರು ಕವಿ/ಲೇಖಕರಲ್ಲಿ **ಒಬ್ಬರ** ಪರಿಚಯ ಬರೆಯಿರಿ. 1 × 5 = 5

(1) ಕುಮಾರವ್ಯಾಸ (2) ಹಾ.ಮಾ. ನಾಯಕ

II. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ** 20 ವಾಕ್ಯಗಳು ಮೀರದಂತೆ ಉತ್ತರಿಸಿ. 1 × 5 = 5

(1) ಬತ್ತಿ, ಎಣ್ಣೆ, ಭಕ್ತಿ, ಯೋಗಿ, ಜೇಡ – ಇವುಗಳ ಆತ್ಮ ಸಮರ್ಪಣೆಯ ಆಶಯಗಳನ್ನು ಕವಿತೆ ಹೇಗೆ ಚಿತ್ರಿಸಿದೆ ?

(2) ಸಿರಿತನ ಮತ್ತು ನೆರೆಹೊರೆಯವರ ಬಗ್ಗೆ ಜನಪದರು ಹೇಳುವ ಮಾತುಗಳನ್ನು ಕುರಿತು ಬರೆಯಿರಿ.

III. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ** 20 ವಾಕ್ಯಗಳು ಮೀರದಂತೆ ಉತ್ತರಿಸಿ. $1 \times 5 = 5$

(1) ತಾಯಿ – ತಂದೆ – ಶಿಕ್ಷಕರು ಸೇರಿ ಆದ ತ್ರಿಭುಜವೇ ಉತ್ತಮ ಬದುಕಿಗೆ ಆದರ್ಶ ಮಾದರಿ ಹೇಗೆ ? ವಿವರಿಸಿರಿ.

(2) ಮುದ್ದಣ – ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿರಿ.

IV. ಈ ಕೆಳಗಿನ ಎರಡು ಪ್ರಶ್ನೆಗಳಲ್ಲಿ **ಒಂದಕ್ಕೆ** 20 ವಾಕ್ಯಗಳು ಮೀರದಂತೆ ಉತ್ತರಿಸಿ. $1 \times 5 = 5$

(1) ಆನೆ ಮತ್ತು ಮಾವುತ ವೇಲಾಯುಧನನ್ನು ಸಾಗ ಹಾಕಲು ಮಠದವರು ಹವಣಿಸಿದ್ದೇಕೆ ?

(2) ಡ್ರೈವರ್ ಅಬ್ಬಾಸ್ ಮತ್ತು ಕ್ಲೀನರ್ ಕೃಷ್ಣರ ಸಾವಿಗೆ ಕೃಷ್ಣೇಗೌಡ್ರ ಆನೆ ಕಾರಣವೆ ? ವಿವರಿಸಿ.

V. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂದರ್ಭ ಸೂಚಿಸಿ ವಿವರಿಸಿ ಬರೆಯಿರಿ. $2 \times 3 = 6$

(1) ನಾರುವ ದುರ್ಗಂಧ ಬಿಡಬಲ್ಲುದೆ ?

(2) ಬಟ್ಟೆಯಲಿ ಮೈ ತುರುಕಿ ಓಡುವುದು.

(3) ಎಣ್ಣೆ ತೀರಿರುವ ದೀಪಗಳಿಗೆ ಬತ್ತಿ ಹೊಸೆಯುವ ಕೆಲಸ.

(4) ದೀನ ದಲಿತತನಕ್ಕೆ ಧಿಕ್ಕಾರವಿರಲಿ.

VI. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂದರ್ಭ ಸೂಚಿಸಿ ವಿವರಿಸಿ ಬರೆಯಿರಿ. $2 \times 3 = 6$

(1) ನೀರು ಬಿದ್ದರೆ ಕಣ್ಣು ಹೋಗುವ ಅಪಾಯ ಇದೆ.

(2) ಇಂಗ್ಲಿಷ್ ಹಿಂದಿ ಬಾರದವರು ವಿಮಾನ ಪ್ರಯಾಣ ಮಾಡಬಾರದೆ ?

(3) ಮೂರು ಬೇಸಿಗೆಯವರೆಗೆ ಚಿನ್ನಮ್ಮನ ದುಡಿತಕ್ಕೆ ಪಡಿಯಿಲ್ಲ.

(4) ಕಬ್ಬಮಂ ಕಂಡಲ್ತೆ ಕಚ್ಚವೆಯನಿತ್ತರ್.

VII. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. $2 \times 2 = 4$

(1) ಯಾರಿಗೆ ಷಡ್ರಸಾನ್ನವನಿಕ್ಕಿ ಉಪಯೋಗವಿಲ್ಲ ? ಏಕೆ ?

(2) ಕವಿಯ ಪ್ರಕಾರ ಮುಪ್ಪು ಮತ್ತು ಹರೆಯದ ನಡುವಿನ ವ್ಯತ್ಯಾಸವೇನು ?

(3) ಶಿಲುಬೆಗೇರಿಸಿದವರ ಗುಣಗಳು ಇಂದು ಯಾವ ವೇಷ ತಾಳಿವೆ ?

(4) ದನಗಳಿಗೆ ಜನಗಳಿಗೆ ಏನೇನು ಇಲ್ಲ ?

VIII. ಈ ಕೆಳಗಿನ ನಾಲ್ಕರಲ್ಲಿ **ಎರಡಕ್ಕೆ** ಸಂಕ್ಷಿಪ್ತವಾಗಿ ಉತ್ತರಿಸಿ. **2 × 2 = 4**

(1) ಮಾರ್ಷ್‌ನನ್ನು ಕಂಡು ಆದಿವಾಸಿಗಳು ಹೇಗೆ ಪ್ರತಿಕ್ರಿಯಿಸಿದರು ?

(2) ಕುಂಡದಲ್ಲಿ ನೆಟ್ಟ ಗಿಡಗಳ ಸ್ಥಿತಿ ಹೇಗಿರುತ್ತದೆ ?

(3) ಕಲಾಂ ಮೇಷ್ಟ್ರು ಹೇಳಿದ ಯಶಸ್ಸಿನ ಪಂಚಾಕ್ಷರಿ ಮಂತ್ರ ಯಾವುದು ?

(4) ಗಿಡ್ಡ ಮಾಸ್ತರು ಶಾಲೆಯಲ್ಲಿ ಹುಡುಗರಿಗೆ ಏಕೆ ಹೊಡೆಯುತ್ತಾರೆ ?

IX. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿ. **5 × 1 = 5**

(1) ರಾವಣನಿಗೆ ಯಾರ ಬಗ್ಗೆ ವೈರಾಗ್ಯ ಮೂಡಿತು ?

(2) ಕಲಿಭೀಮನು ಎಂತಹ ಗಂಡನೆಂದು ದ್ರೌಪದಿ ಹೇಳಿದ್ದಾಳೆ ?

(3) ಯಾರಿಗೆ ನೆರಳು ಸಿಗುವುದಿಲ್ಲ ?

(4) ಮಗು ಹುಟ್ಟಿದ್ದು ಎಲ್ಲಿ ?

(5) ಚಿತ್ತವನ್ನು ಯಾವುದಕ್ಕೆ ಹೋಲಿಸಲಾಗಿದೆ ?

X. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿ. **5 × 1 = 5**

(1) ದುರಂತದ ಶಾಪಕ್ಕೆ ತುತ್ತಾಗುವವರು ಯಾರು ?

(2) ಯಾವುದು ನಮ್ಮ ಮೈಗೆ ಹತ್ತುವುದು ?

(3) ಚಿಪ್ ಎಂದರೇನು ?

(4) ಮನೋರಮೆ ಬಹುಮಾನವಾಗಿ ಏನನ್ನು ಕೊಡುವೆನೆಂದಳು ?

(5) ಮೂರು ಕಾಲಿನ ಕುರ್ಚಿ ಎಲ್ಲಿದೆ ?

XI. ಈ ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ **ಒಂದು** ವಾಕ್ಯದಲ್ಲಿ ಉತ್ತರಿಸಿ. **5 × 1 = 5**

(1) ಆನೆಯ ಕಾಲಿಗೆ ಸರಪಳಿ ಕಟ್ಟಲಾಗದೆಂದು ವೇಲಾಯುಧ ಹೇಳಿದ್ದೇಕೆ ?

(2) ಆನೆ ಕಣ್ಮರೆಯಾದ ವಿಚಾರವನ್ನು ನಾಗರಾಜನಿಗೆ ಹೇಳಿದವರ್‍ಯಾರು ?

(3) ಟೆಲಿಫೋನ್ ಸಿಬ್ಬಂದಿ ಯಾರ ವಿರುದ್ಧ ಮುಷ್ಕರ ಹೂಡಿದರು ?

(4) ರೇಂಜರ್ ಆನೆಗೆ ಶೂಟ್ ಮಾಡುವಂತೆ ಯಾರಿಗೆ ಸೂಚಿಸಿದರು ?

(5) ನಾಗರಾಜ ಕೋವಿ ಹಿಡಿದು ಎಲ್ಲಿ ಕುಳಿತಿದ್ದ ?

XII. ಈ ಕೆಳಗಿನ ಛಂದಸ್ಸುಗಳಲ್ಲಿ **ಒಂದರ** ಲಕ್ಷಣಗಳನ್ನು ಬರೆಯಿರಿ. **1 × 5 = 5**

(1) ಸಾಂಗತ್ಯ (2) ವಾರ್ಧಕ ಷಟ್ಪದಿ (3) ಉತ್ಪಲಮಾಲಾವೃತ್ತ

XIII. ಈ ಕೆಳಗಿನ ಪದ್ಯಗಳಲ್ಲಿ **ಒಂದಕ್ಕೆ** ಪ್ರಸ್ತಾರ ಹಾಕಿ, ಗಣ ವಿಂಗಡಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ. **1 × 5 = 5**

(1) ಪೊಸಗಾರ ಸಿಡಿಲ ಮಸಕಮ
ನಸಕಳಿದು ಕೃತಾಂತ ಜಿಹ್ವೆ ಪೊಡಕರಿಸುವವೋಲ್.

(2) ಛದ್ಮತ್ತೆನೆ ನೋಡಿದಂ ಮಯತನೂಜೆಯ ಬಾಡಿದ ವಕ್ತ್ರಪದ್ಮಮಂ.

(3) ಹೆಂಡತಿಯ ಹರಿಬದಲಿಯೊಬ್ಬನೆ
ಗಂಡುಗೂಸೇ ವೈರಿಯನು ಕಡಿ
ಖಂಡವನು ಮಾಡುವನು ಮೇಣ್ ತನ್ನೊಡಲನಿಕ್ಕುವನು.

XIV. ಈ ಕೆಳಗಿನ ಮೂರರಲ್ಲಿ **ಒಂದರ** ಅಲಂಕಾರವನ್ನು ಗುರುತಿಸಿ ಬರೆಯಿರಿ. **1 × 5 = 5**

(1) ಶಿರವೇ ಹೊನ್ನ ಕಳಸವಯ್ಯ.

(2) ಶ್ರೀರಾಮನು ಕೈಕೆಗೆ ನಮಸ್ಕರಿಸಿ ಮಂಗಳವು ಮನೆಯನ್ನು ತೊರೆಯುವಂತೆ ತೊರೆದನು.

(3) ಮಾತು ಬಲ್ಲವನಿಗೆ ಜಗಳವಿಲ್ಲ, ಊಟ ಬಲ್ಲವನಿಗೆ ರೋಗವಿಲ್ಲ.

XV. (A) ಈ ಕೆಳಗಿನ ಪದಗಳಲ್ಲಿ **ಐದಕ್ಕೆ** ಅರ್ಥ ಬರೆಯಿರಿ. **5 × 1 = 5**

(1) ಕುಸುಮ (2) ಕೊಳ್ಳಿ (3) ಉಷೆ (4) ಆಜ್ಯ

(5) ನಿರಾಳ (6) ಸೌಟು (7) ಸಾತ್ವಿಕ (8) ಸಲಾಮ್

(B) ಈ ಕೆಳಗಿನ ಪದಗಳಲ್ಲಿ **ಆರಕ್ಕೆ** ವಿರುದಾರ್ಥ ಬರೆಯಿರಿ. **6 × 1 = 6**

(1) ಕನಸು (2) ಬಡವ (3) ಶತ್ರು (4) ಶಾಶ್ವತ

(5) ಸಮ (6) ಆಸ್ತಿಕ (7) ಭೂಮಿ (8) ನರಕ

(C) ಈ ಕೆಳಗಿನ **ಎಲ್ಲಾ** ಪದಗಳಿಗೆ ಒಂದೊಂದು ಸ್ವಂತ ವಾಕ್ಯ ರಚನೆ ಮಾಡಿರಿ. **5 × 1 = 5**

(1) ವಾಸನೆ (2) ತಿರಸ್ಕಾರ (3) ಬಂಧನ

(4) ಮೋಕ್ಷ (5) ಸೇವಕ

XVI. (A) ಈ ಕೆಳಗಿನವುಗಳಲ್ಲಿ **ಎರಡಕ್ಕೆ** ಟಿಪ್ಪಣಿ ಬರೆಯಿರಿ. **2 × 2 = 4**

(1) ಕ್ರಿಯಾ ಸಮಾಸ (2) ಕನ್ನಡ ಸಂಧಿ (3) ಸರ್ವನಾಮ (4) ರಿಕ್ತಾಕ್ಷರ

(B) ಈ ಕೆಳಗಿನವುಗಳಲ್ಲಿ **ಒಂದಕ್ಕೆ** ಪ್ರಬಂಧ ಬರೆಯಿರಿ. **1 × 5 = 5**

(1) ಸ್ವಚ್ಛ ಭಾರತದ ಪರಿಕಲ್ಪನೆಗಳು

(2) ದೈಹಿಕ ಶಿಕ್ಷಣ

(3) ಪ್ರವಾಸೋದ್ಯಮ